ಗಳ ಲೆಕ್ಕದಲ್ಲಿ ಇಟ್ಟುಕೊಂಡು ಆಯಾಯ ಶಾಲೆಗೆ ವೆಚ್ಚ ಮಾಡುವ ಅವಕಾಶವಿರುತ್ತದೆ. ಆದರೆ ಸರ್ಕಾರಿ ಪ್ರೌಢಶಾಲೆ ಮತ್ತು ಕಿರಿಯ ಕಾಲೇಜುಗಳಿಗೆ ಈ ಸೌಲಭ್ಯವಿರುವುದಿಲ್ಲ.

ಪ್ರಸ್ತುತ ಪ್ರತ್ಯೇಕ ಸರ್ಕಾರಿ ಕಿರಿಯ ಕಾಲೇಜುಗಳಿಗೆ ವಿಜ್ಞಾನೋಪಕರಣಗಳ ಅವಶ್ಯಕತೆ ಇದ್ದಲ್ಲಿ ಈ ಬಗ್ಗೆ ಸಂಬಂಧಪಟ್ಟ ಪ್ರಾಚಾರ್ಯರುಗಳು ಪ್ರಸ್ತಾವನೆಯನ್ನು ಆಯುಕ್ತರ ಮುಖಾಂತರ ಸರ್ಕಾರಕ್ಕೆ ಕಳುಹಿಸಿ, ಹೆಚ್ಚುವರಿ ಹಣ ಬಿಡುಗಡೆ ಬಗ್ಗೆ ಪರಿಶೀಲಿಸಲಾಗುವುದು.

ಶ್ರೀ ಮಹಮದ್ ಮೊಯಿನುದ್ದೀನ್.—ಮಾನ್ಯ ಅಧ್ಯಕ್ಷರೇ, ನಾನು ಕೇಳಿದ್ದೇ ಒಂದು ಉತ್ತರ ಬಂದಿರುವುದು ಇನ್ನೊಂದು. ನನ್ನ ಪ್ರಶ್ನೆಗೆ ಸಂಬಂಧಪಟ್ಟ ಉತ್ತರ ಇಲ್ಲಿ ಇಲ್ಲ. ನಾಲ್ಕು ವರ್ಷಗಳಿಂದ ಈ ವಿದ್ಯಾರ್ಥಿಗಳಿಂದ ಪ್ರಯೋಗಾಲಯ ಶುಲ್ಕವನ್ನು ವಸೂಲು ಮಾಡುತ್ತಿದ್ದಾರೆ. ಆದರೆ ಪ್ರಯೋಗಾಲಯಕ್ಕೆ ಸಂಬಂಧಿಸಿದ ಉಪಕರಣಗಳನ್ನು ಇದಕ್ಕೆ ಪ್ರತಿಯಾಗಿ ಸರಬರಾಜು ಮಾಡುತ್ತಿಲ್ಲ. ಸಾದಿಲ್ವಾರು ವೆಚ್ಚದ ಬಗ್ಗೆ ಹೇಳಿದ್ದೀರಿ. ನಾನು ಇಲ್ಲಿ ನಿರ್ದಿಷ್ಟವಾಗಿ ಹೇಳಿರುವುದು ಏನೆಂದರೆ, ಪ್ರಯೋಗಾಲಯ ಶುಲ್ಕವನ್ನು ಸಂಗ್ರಹ ಮಾಡಿದ ನಂತರ, ಅದನ್ನು ಖಜಾನೆಗೆ ಜಮಾ ಮಾಡಿದ ಬಳಿಕ, ಪುನಃ ಅದನ್ನು ಶಾಲೆಗಳಿಗೆ ಕೊಡುತ್ತಿಲ್ಲ. ಇದರಿಂದ ಏನಾಗುತ್ತಿದೆ ಎಂದರೆ ಉಪಕರಣಗಳಿಲ್ಲದೆ ವಿದ್ಯಾರ್ಥಿಗಳಿಗೆ ಪ್ರಾಕ್ಟಿಕಲ್ಸ್ ನಡೆಯಲು ಸಾಧ್ಯವಾಗದೆ ಅವರು ಅನುತ್ತೀರ್ಣರಾಗಿದ್ದಾರೆ ಸರ್ಕಾರಿ ಶಾಲೆಗಳಿಗೆ ಶ್ರೀಮಂತರೇ ಹೆಚ್ಚಾಗಿ ಹೋಗುವುದಿಲ್ಲ. ಅಲ್ಲಿ ಹೋಗುವವರು ಬಡಮಕ್ಕಳು ಹೀಗಿರುವಾಗ ದಂಡ್ಡು ಕೊಡದಿದ್ದರೆ ಮತ್ತು ಉಪಕರಣಗಳನ್ನು ಕೂಡ ಕೊಡದೇ ಇದ್ದರೆ ಹೇಗೆ ? ಇದರ ಬಗ್ಗೆ ಸರ್ಕಾರದ ಸ್ಪಷ್ಟವಾದ ನಿಲುವು ಏನೆಂಬುದು ಬೇಕಾಗಿದೆ.

ಶ್ರೀ ಡಿ. ಮಂಜುನಾಥ್.—ಸರ್ಕಾರದ ನಿಲುವನ್ನು ಹೇಳಿದ್ದೇನೆ. ಪ್ರಾಚಾರ್ಯರು ಇಂತಿಂಥ ಪ್ರಯೋಗಾಲಯ ಉಪಕರಣಗಳು ಹಿರಿಯಸಲು ಎಷ್ಟು ಹಣ ಬೇಕು ಎಂದು ಆಯುಕ್ತರಿಗೆ ತಿಳಿಸಬೇಕು. ಅವರು ಹಣ ಬಿಡುಗಡೆ ಮಾಡುತ್ತಾರೆ. ಇಲ್ಲಿಯ ಪ್ರಾಚಾರ್ಯರು ತಿಳಿಸಿದ್ದಾರೋ ಇಲ್ಲವೋ ಗೊತ್ತಿಲ್ಲ.

ಶ್ರೀ ಮಹಮದ್ ಮೊಯಿನುದ್ದೀನ್.—ನಾಲ್ಕು ವರ್ಷಗಳಿಂದ ಎಲ್ಲಾ ಸ್ಕೂಲಿನವರೂ ಕೇಳಿದ್ದಾರೆ ಹೀಗೆ ಕೇಳಿದ್ದರೂ ಕೂಡ ಸಂಬಂಧಪಟ್ಟ ಇಲಾಖೆಯ ನಿರ್ದೇಶಕರು ಹಣವನ್ನು ಬಿಡುಗಡೆ ಮಾಡಿಲ್ಲ. There is a clear cut lapse on the part of the department in not having entertained the request of the High School for the last four years. Government should assure me the action to be taken on the departmental officers.

ಶ್ರೀ ಡಿ. ಮಂಜುನಾಥ್.—ನಾಲ್ಕು ವರ್ಷಗಳಿಂದ ಕೇಳಿದ್ದರೂ ಕೊಟ್ಟಿಲ್ಲವೆಂದು ಹೇಳಿದ್ದಾರೆ. ಹೀಗೆ ಕೂಡದೇ ಇದ್ದರೆ ಸಂಬಂಧಪಟ್ಟ ಅಧಿಕಾರಿಗಳ ಮೇಲೆ ಖಂಡಿತ ಕ್ರಮ ತೆಗೆದುಕೊಳ್ಳುತ್ತೇನೆ.

(iii) ಅನುತ್ತೀರ್ಣರಾದ ಪರಿಶಿಷ್ಟ ಜಾತಿ/ವರ್ಗಗಳ ವಿದ್ಯಾರ್ಥಿಗಳಿಗೆ ವಸತಿ ಮತ್ತು ಊಟ ವ್ಯವಸ್ಥೆ ನಿಲ್ಲಿಸಿರುವ ಬಗ್ಗೆ

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ, ರಾಜ್ಯದ ಪರಿಶಿಷ್ಟ ಜಾತಿ ಮತ್ತು ವರ್ಗಗಳ ಮೆಟ್ರಿಕ್ ನಂತರದ ತರಗತಿಗಳಲ್ಲಿ ಅಭ್ಯಾಸ ಮಾಡುತ್ತಿರುವ ವಿದ್ಯಾರ್ಥಿಗಳು ಮಧ್ಯದಲ್ಲಿ ಅನುತ್ತೀರ್ಣ ಹೊಂದಿದರೆ ಅವರಿಗೆ ವಸತಿ ಮತ್ತು ಊಟದ ವ್ಯವಸ್ಥೆಯನ್ನು ವಿದ್ಯಾರ್ಥಿನಿಲಯಗಳಲ್ಲಿ ನಿಲ್ಲಿಸಿರುವ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಮಂತ್ರಿಗಳು).—ಸರ್ಕಾರಿ ಆಜ್ಞೆ ಸಂಖ್ಯೆ ಎಸ್ ಡಬ್ಲ್ಯೂಎಲ್ ೧೧೯ ಎಸ್‌ಇಡಬ್ಲ್ಯೂಬಿ ದಿನಾಂಕ ೧೦-೧೦-೮೫ ಇದರಲ್ಲಿ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಓದುತ್ತಿರುವ ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿ ಪ್ರವೇಶಕ್ಕಾಗಿ ಹೀವು ನಿಯಮಗಳನ್ನು ಪಾಲಿಸಲಾಗಿದೆ. ಈ ನಿಯಮದ ಪ್ರಕಾರ ಒಬ್ಬ ವಿದ್ಯಾರ್ಥಿಯು ಅನುತ್ತೀರ್ಣನಾದರೆ ಮುಂದಿನ ವರ್ಷದಲ್ಲಿ ವಿದ್ಯಾರ್ಥಿನಿಲಯಕ್ಕೆ ಪ್ರವೇಶಕ್ಕೆ ಅವಕಾಶವಿರುವುದಿಲ್ಲ, ಹಾಗೂ ವಿದ್ಯಾರ್ಥಿಯು ಎಲ್ಲಾ ವಿಷಯಗಳಲ್ಲಿ ತೇರ್ಗಡೆಯಾದರೆ ಮಾತ್ರ ಈ ನಿಯಮದ ಪ್ರಕಾರ ಪ್ರವೇಶಕ್ಕೆ ಅರ್ಹನಾಗಿರುತ್ತಾನೆ.

೧೯೮೬-೮೭ನೇ ಸಾಲಿನಲ್ಲಿ ಬೆಂಗಳೂರಿನ ಸಾರ್ವಜನಿಕ ಕಲಾ ಮತ್ತು ವಿಜ್ಞಾನ ಕಾಲೇಜಿನ ವಿದ್ಯಾರ್ಥಿನಿಲಯದಲ್ಲಿದ್ದು ಪರೀಕ್ಷೆಯಲ್ಲಿ ಅನುತ್ತೀರ್ಣರಾಗಿ ಕೆಲವು ವಿದ್ಯಾರ್ಥಿಗಳು ಸರ್ಕಾರಕ್ಕೆ ಈ ಆಜ್ಞೆ ಬಗ್ಗೆ ಮನವಿ ಸಲ್ಲಿಸಿ ಅದರಲ್ಲಿ ಈಗಾಗಲೇ ಹೊರಡಿಸುವ ಸರ್ಕಾರಿ ಆದೇಶದಿನಾಂಕ ೧೦-೧೦-೮೫ಕ್ಕೆ ಐದು ತಿಂಗಳು ಸಡಿಲಿಸಬೇಕೆಂದು ಹಾಗೂ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಮತ್ತೆ ಪ್ರವೇಶವನ್ನು ಕೊಡಬೇಕೆಂದು ಕೋರಿಕೊಂಡಿದ್ದರು. ಈ ಕೋರಿಕೆ ಕಾಲೇಜಿನಲ್ಲಿ ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದವಾಗ್ಯೂ ವರ್ಗಾವಣೆಯಾಗುವ ಪದ್ಧತಿ ಇದೆಯೆಂದು ತಿಳಿಸಿದ್ದುದರ ಮೇರೆಗೆ, ಈ ಮೇಲ್ಕಂಡ ಮನವಿಯನ್ನು ಕಾಲಂಕುಷವಾಗಿ ಪರಿಶೀಲಿಸಿದ ನಂತರ ಸರ್ಕಾರವು ರಾಜ್ಯದಲ್ಲಿ ಇರುವ ಎಲ್ಲಾ ಕಾಲೇಜು ವಿದ್ಯಾರ್ಥಿನಿಲಯಗಳಲ್ಲಿದ್ದು ಎಲ್ಲಾ ವಿಷಯಗಳಲ್ಲಿಯೂ ಅನುತ್ತೀರ್ಣರಾದ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ದಿನಾಂಕ ೫-೨-೧೯೮೬ರಲ್ಲಿ ಆಜ್ಞೆ ಮಾಡಿದೆ. ಈ ಆಜ್ಞೆಯು ಪ್ರಸ್ತುತ ವರ್ಷಕ್ಕೆ ಮಾತ್ರ ಅನ್ವಯಿಸುತ್ತದೆ. ಈಗಾಗಲೇ ವಿದ್ಯಾರ್ಥಿನಿಲಯಗಳು ಪ್ರಸ್ತುತ ವರ್ಷ ಪ್ರಾರಂಭವಾಗಿ ಕಾರ್ಯನಿರ್ವಹಿಸುತ್ತಿವೆ. ಹಾಗೂ ಯಾವುದಾದರೂ ವಿದ್ಯಾರ್ಥಿನಿಲಯ ಪ್ರಾರಂಭ ಮಾಡಿಲ್ಲವೆಂದು ತಿಳಿದು ಬಂದರೆ ಅಂತಹ ವಿದ್ಯಾರ್ಥಿ ನಿಲಯ ಪ್ರಾರಂಭಮಾಡಲು ಸೂಕ್ತ ಆದೇಶ ಕೊಡಲಾಗುವುದು.

ಅನುತ್ತೀರ್ಣರಾದಂತಹ ವಿದ್ಯಾರ್ಥಿಗಳನ್ನು ನಿಲಯದಲ್ಲಿ ಮುಂದುವರೆಸುತ್ತಾ ಹೋದರೆ ಮುಂದೆ ಬರುವ ಪ್ರತಿಭಾವಂತ ಪರಿಶಿಷ್ಟ ಜಾತಿ : ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯದ ಸೌಲಭ್ಯದಿಂದ ವಂಚಿತರಾಗುತ್ತಾರೆ.

ಒಳ್ಳೆಯ ವಿದ್ಯಾರ್ಥಿಗಳಿಗೆ ಅದ್ಯತೆ ಮತ್ತು ಪ್ರೋತ್ಸಾಹ ನೀಡುವ ಉದ್ದೇಶದಿಂದ ಮೇಲ್ಕಂಡ ನಿಯಮ ಹೊರಡಿಸಲಾಗಿತ್ತು. ಹೀಗಿದ್ದರೂ ವಿದ್ಯಾರ್ಥಿಗಳ ಮನವಿಗಳನ್ನು ಪುರಸ್ಕರಿಸಿ ಈ ವರ್ಷದ ಮಟ್ಟಿಗೆ ಈ ನಿಯಮವನ್ನು ತಡೆಹಿಡಿಯಲಾಗಿದೆ.

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಇವತ್ತಿನ ದಿವಸ ಎರಡು ಸರ್ಕಾರಿ ಆಜ್ಞೆಗಳನ್ನು ಉಲ್ಲೇಖ ಮಾಡಿದ್ದಾರೆ. ಇದೇ ರೀತಿಯಾಗಿ ನಾನು ಒಂದು ಸರ್ಕಾರಿ ಆಜ್ಞೆಯ ಅನುಬಂಧವನ್ನು ಈ ಸಭೆಯಲ್ಲಿ ತಿಳಿಸುವುದಕ್ಕೆ ಇಚ್ಛಿಸುತ್ತೇನೆ. Annexure to Go. No. SWL 119 SCW 85 dated 10-10-85 ಇದರಲ್ಲಿ ರೂಲ್ ನಂ, ೫ರಲ್ಲಿ SC/ST students admitted in the Hostels will be allowed to continue in the Hostels till they complete the course provided they are promoted to the next higher class ಅಂತ ಇದೆ. ಆದರೆ ಕಾಲೇಜಿನಲ್ಲಿ ಕ್ಯಾರಿಓವರ್ ಸಿಸ್ಟಮ್ ಇರಬೇಕಾದರೆ ಹಾಸ್ಟೆಲ್‌ಗಳಲ್ಲಿ ಏಕೆ ತೆಗೆದುಹಾಕಬೇಕಿತ್ತು ಎನ್ನುವುದೂ ಪ್ರಶ್ನೆ. ಎರಡನೆಯದು ಹಾಸ್ಟೆಲ್‌ಗಳಲ್ಲಿ ಓದಬೇಕಾದರೆ ಮಕ್ಕಳಿಗೆ ಅವರ ಕಾಲೇಜು ವಿದ್ಯಾಭ್ಯಾಸಕ್ಕೆ ತಕ್ಕಂಥ ವಾತಾವರಣ ಇದೆಯೋ ಇಲ್ಲವೋ ಎಂಬುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ?

ಶ್ರೀ ಬಿ.ಬಿ. ನಿಂಗಯ್ಯ.—ಈಗ ಮಾನ್ಯ ಸಚಿವರು ನಮ್ಮ ಪ್ರಶ್ನೆಗೆ ಉತ್ತರವನ್ನು ಕೊಟ್ಟಿದ್ದಾರೆ. ಈಗ ಕೇಳಿದಂಥ ಮಾನ್ಯ ಸ್ನೇಹಿತರ ಪ್ರಶ್ನೆಯನ್ನು ಬೆಂಬಲಿಸುತ್ತಾ, ಈಗ ಕರ್ನಾಟಕ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಹಾಸ್ಟೆಲುಗಳಲ್ಲಿ ಈ ಜನವಾಂಗಗಳಿಗೆ ಸೇರಿದ ವಿದ್ಯಾರ್ಥಿಗಳನ್ನು ಗಮನಿಸುವುದಕ್ಕೆ ಇನ್ಸ್‌ಪೆಕ್ಟರುಗಳು ಇದ್ದಾರೆ. ಆದರೆ ಚಿಕ್ಕಮಗಳೂರು ಹಾಸ್ಟೆಲ್‌ನಲ್ಲಿ ಪರಿಸರ ಹೇಗಿದೆ ಎಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಸುತ್ತೇನೆ. ಅಲ್ಲಿ ಒಂದೊಂದು ಕೋಣೆಗಳಲ್ಲಿ ೨೦-೩೫ಕ್ಕಿಂತಲೂ ಹೆಚ್ಚಾಗಿ ಕಾಲೇಜು ವಿದ್ಯಾರ್ಥಿಗಳನ್ನು ತುಂಬಿ ಘನಗಳ ದೊಡ್ಡಿಯ ಹಾಗೆ ವಾತಾವರಣವನ್ನು ಉಂಟು ಮಾಡಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಿದ್ಯಾರ್ಥಿಗಳು ಸರಿಯಾಗಿ ಓದಿ ತೇರ್ಗಡೆಯಾಗಲು ಸಾಧ್ಯವಿದೆಯೇ ? ಇದು ನನ್ನ ಪ್ರಶ್ನೆ.

ಶ್ರೀ ಹೆಚ್. ಕೆ. ಕುಮಾರಸ್ವಾಮಿ.—ಸನ್ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವಂತೆ ಈಗಿರುವ ಪರೀಕ್ಷಾ ಪದ್ಧತಿಯಲ್ಲಿ ಕೆಲವು ಸಾರಿ ದಡ್ಡರು ಪಾಸಾಗುತ್ತಾರೆ, ಬುದ್ಧಿವಂತ ಹುಡುಗರು ಅನುತ್ತೀರ್ಣರಾಗುತ್ತಾರೆ. ಈ ಮಾನ್ಯ ಸಚಿವರು ಹೇಳಿದ ಹಾಗೆ ಫೇಲ್ ಆದರೆ ಹಾಸ್ಟೆಲ್‌ನಲ್ಲಿ ಪ್ರವೇಶ ಇಲ್ಲವೆಂದು ಹೊಳಿದ್ದಾರೆ. ಆದರೆ ಮೊದಲನೇ ಸಲ ಫೇಲಾದವರಿಗೆ ಒಂದು ಅವಕಾಶವನ್ನು ಕೊಡುವುದು ಒಳ್ಳೆಯದು. ಎರಡನೇ ಸಾರಿ ಫೇಲಾದವರಿಗೆ ಕೊಡುವುದು ಬೇಡ. ಮೊದಲನೇ ಸಾರಿ ಫೇಲಾದವರಿಗೆ ಈ ಅವಕಾಶ ಕೊಡದೇ ಹೋದರೆ ಅವರ ಜ್ಞಾನಾರ್ಜನೆಯನ್ನು ಮೊಟಕು ಮಾಡಿದ ಹಾಗೆ ಆಗುತ್ತದೆ.

ಎರಡನೆಯದಾಗಿ ಹಾಸನದಲ್ಲಿ ಹಾಸ್ಟೆಲ್ ಇನ್ನೂ ಪ್ರಾರಂಭವಾಗಿಲ್ಲ. ಇದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಮುನಿಯಪ್ಪ.—ಮಾನ್ಯ ಅಧ್ಯಕ್ಷರೇ, ಸಾಮಾನ್ಯವಾಗಿ ಪಿ.ಯು.ಸಿಯಿಂದ ಡಿಗ್ರಿವರೆಗೆ ಈ ಹಾಸ್ಟೆಲ್‌ಗಳಲ್ಲಿ ಸೇರಿರತಕ್ಕವರು ಪರಿಶಿಷ್ಟ ಜಾತಿ ಮತ್ತು ಕೋಮುಗಳಿಗೆ ಸೇರಿದವರೇ ಆಗಿರುತ್ತಾರೆ ಮತ್ತು ಇವರೆಲ್ಲರೂ ಕೂಡ ಬಡವರೇ ಆಗಿರುತ್ತಾರೆ. ಅವರು ಅಕಸ್ಮಾತ್ ಫೇಲಾದರೆ ಅವರಿಗೆ ಹಾಸ್ಟೆಲ ಸೌಲಭ್ಯ ಕೊಡುವುದಿಲ್ಲವೆಂದರೆ ಇದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತದೆ ಅವರ ವಿದ್ಯಾಭ್ಯಾಸವನ್ನು ಮೊಟಕು ಮಾಡಿದ ಹಾಗೆ ಆಗುತ್ತದೆ. ಈ ದೃಷ್ಟಿಯಿಂದ ಈ ಸೌಲಭ್ಯವನ್ನು ಮುಂದುವರೆಸಬೇಕೆಂದು ಹೇಳುತ್ತೇನೆ. ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ''ಯಾವುದಾದರೂ ವಿದ್ಯಾರ್ಥಿನಿಲಯ ಪ್ರಾರಂಭ ಮಾಡಿಲ್ಲವೆಂದು ತಿಳಿದುಬಂದರೆ ಅಂತಹ ವಿದ್ಯಾರ್ಥಿನಿಲಯ ಪ್ರಾರಂಭ ಮಾಡಲು ಸೂಕ್ತ ಆದೇಶ ಕೊಡಲಾಗುವುದು'' ಎಂದು ಹೇಳಿದ್ದಾರೆ. ನನ್ನ ಕ್ಷೇತ್ರವಾದ ಚಿಕ್ಕಬಳ್ಳಾಪುರದಲ್ಲಿ ಕಾಲೇಜು ಹಾಸ್ಟೆಲ್ ಇನ್ನೂ ಪ್ರಾರಂಭವಾಗಿಲ್ಲ. ವಿದ್ಯಾರ್ಥಿಗಳು ಪರದಾಡುತ್ತಿದ್ದಾರೆ. ಆದಷ್ಟು ಬೇಗ ಇದು ಪ್ರಾರಂಭವಾಗಲಿಕ್ಕೆ ಆದೇಶ ಕೊಡಬೇಕೆಂದು ಹೇಳುತ್ತೇನೆ.

ಇವೊತ್ತು ಸರ್ಕಾರ ವಿದ್ಯಾಭ್ಯಾಸಕ್ಕೋಸ್ಕರವಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡುತ್ತಿದೆ. ಆದ್ದರಿಂದ ಈ ಜನಾಂಗದ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸದ ಅನುಕೂಲ ಮಾಡಿಕೊಡಬೇಕಾಗಿದೆಯೇ ಹೊರತು ನೀವು ಕುರಿ, ಕೋಳಿ ಮತ್ತು ಎಮ್ಮೆಗಳನ್ನು ಕೊಟ್ಟರೆ ಈ ಜನಾಂಗದವರು ಉದ್ಧಾರವಾಗುವುದಿಲ್ಲವೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಗುರುಪ್ರಸಾದ್ ಅವರು ಬಹಳ ಚೆನ್ನಾಗಿ ಹೇಳಿದ್ದಾರೆ. ಫೇಲ್ ಆದ ಹುಡುಗರಿಗೂ ಹಾಸ್ಟೆಲ್‌ಗಳಲ್ಲಿ ವಸತಿ ಮತ್ತು ಊಟದ ವ್ಯವಸ್ಥೆಯನ್ನು ಮುಂದುವರೆಸಬೇಕು, ಈ ಬಗ್ಗೆ ಅಡ್ಮಿಷನ್ ರೂಲ್ ಔರಲ್ಲಿ ರಿಸ್ಟ್ರಿಕ್ಷನ್ ಮಾಡಿರುವುದು ಸರಿಯಲ್ಲ ಎಂದು ಹೇಳಿದ್ದಾರೆ. ಈ ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿಗಳು ಒಂದು ತರಗತಿಯಲ್ಲಿಯೂ ಫೇಲ್ ಆಗದೆ ಪಾಸ್ ಆಗಬೇಕು ಮತ್ತು ಸರಿಯಾಗಿ ಓದಬೇಕು ಎಂಬ ದೃಷ್ಟಿಯಿಂದ ಮತ್ತು ಅವರ ಹಿತವನ್ನು ಕಾಪಾಡುವುದಕ್ಕೋಸ್ಕರವಾಗಿ ಈ ಒಂದು ಕ್ಲಾಸ್‌ನ್ನು ಅಡ್ಮಿಷನ್ ರೂಲ್‌ನಲ್ಲಿ ಆಳವಡಿಸಿದ್ದೇವೆ ಈಗ ಈ ವರ್ಗಗಳ ವಿದ್ಯಾರ್ಥಿಗಳಲ್ಲಿಯೂ ಸಹ ಚೆನ್ನಾಗಿ ಓದಿ ಮುಂದೆ ಬರಬೇಕೆಂಬ ಪೈಪೋಟಿ ಬಂದಿದೆ. ಆದ್ದರಿಂದ ಇವರು ಮೊದಲನೆಯ ಇಲ್ಲವೇ ಎರಡನೆಯ ಕ್ಲಾಸ್‌ನಲ್ಲಿ, ತೇರ್ಗಡೆ ಹೊಂದಿವರೆ, ಒಳ್ಳೆಯ ಕೆಲಸಕ್ಕೆ ಸೇರಲು ಇಲ್ಲವೇ ವೃತ್ತಿಪರವಾದಂಥ ಕೆಲಸಗಳನ್ನು ಅವಕಾಶವಿರುತ್ತದೆ. ಇದನ್ನು ಬಿಟ್ಟು ಕ್ಯಾರಿ ಓವರ್‌ಗೆ ಅವಕಾಶ ಮಾಡಿಕೊಟ್ಟರೆ, ಅವರು ಕೊನೆಯ ವರ್ಷದಲ್ಲಿ ಎಲ್ಲ ವಿಷಯಗಳಲ್ಲಿಯೂ ಪಾಸ್ ಮಾಡುವುದು ಕಷ್ಟವಾಗುತ್ತದೆ. ಕೆಲವರು ಅಂತಿಮ ವರ್ಷದ ಪರೀಕ್ಷೆಯಲ್ಲಿ ಪಾಸಾಗುತ್ತಾರೆ, ಆದರೆ ಮೊದಲನೆಯ ಮತ್ತು ಎರಡನೆಯ ವರ್ಷದ ಪರೀಕ್ಷೆಗಳಲ್ಲಿ ಕೆಲವು ವಿಷಯಗಳಲ್ಲಿ ಫೇಲ್ ಆಗಿರುತ್ತಾರೆ. ಇಂತಹ ಕೆಲವು ವಿದ್ಯಾರ್ಥಿಗಳು ಇಂದು ಬೀದಿ ಪಾಲಾಗಿದ್ದಾರೆ. ಆದ್ದರಿಂದ ಇನ್ನು ಮುಂದೆಯಾದರೂ ಈ ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಫೇಲ್ ಆಗುವುದನ್ನು ಬಿಟ್ಟುಬಿಡಬೇಕೆಂದು ತಮ್ಮ ಮೂಲಕ ಅವರಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇವೆ. ಅವರ ಹಿತದೃಷ್ಟಿಯಿಂದಲೇ ಪಾಸಾಗುವುದು ಒಳ್ಳೆಯದು. ಈ ಸಲ ಈ ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ, ಕೆಲವರು ಎಲ್ಲ ವಿಷಯಗಳಲ್ಲಿಯೂ ಫೇಲ್ ಆಗಿದ್ದರೂ ಸಹ, ಅಂತಹವರಿಗೆ ಹಾಸ್ಟೆಲ್‌ಗಳಲ್ಲಿರುವುದಕ್ಕೆ ಅವಕಾಶ ಮಾಡಿಕೊಡುವಂತಹ ಒಂದು ಸರ್ಕಾರಿ ಆಜ್ಞೆಯನ್ನು ಹೊರಡಿಸಿದ್ದೇವೆ. ಇದೇ ಪದ್ಧತಿಯನ್ನು ಇನ್ನು ಮುಂದೆಯೂ ಮುಂದುವರಿಸಿಕೊಂಡು ಹೋದರೆ, ಅದರಿಂದ ನಮ್ಮ ಮಕ್ಕಳಿಗೇ ಮಾರಕವಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತಿದ್ದೇನೆ.

ಇನ್ನು ಹಾಸ್ಟಲ್‌ಗಳ ಸ್ಥಿತಿಗತಿಗಳ ಬಗ್ಗೆ ಮಾನ್ಯ ಕುಮಾರಸ್ವಾಮಿಯವರು ಹೇಳಿದರು. ಮಾನ್ಯ ಮುನಿಯಪ್ಪನವರು ಸಹ ಹೇಳಿದರು. ನಾನು ಸಮಾಜ ಕಲ್ಯಾಣ ಇಲಾಖೆ ಮಂತ್ರಿಯಾದಾ ಕೂಡಲೇ ಅನೇಕ ಮಾನ್ಯ ಸದಸ್ಯರು ನನ್ನ ಬಳಿ ಬಂದು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳಿಗೆ ಅನುಕೂಲ ಮಾಡಿಕೊಡಲು ಹೆಚ್ಚಿನ ಹಾಸ್ಟೆಲ್‌ಗಳನ್ನು ತೆರೆಯಬೇಕೆಂದು ಮನವಿಗಳನ್ನು ಕೊಟ್ಟರು. ಆದರೆ ಇದಕ್ಕೆ ಬಜೆಟ್‌ನಲ್ಲಿ

ಪ್ರಾವಿಷನ್ ಇರಲಿಲ್ಲ. ನಂತರ ನಾನು ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಈ ಬಗ್ಗೆ ಮಾತನಾಡಿ ಎಸ್.ಸಿ. ಮತ್ತು ಎಸ್.ಟಿ. ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ನೂರು ಹಾಸ್ಟೆಲ್‌ಗಳನ್ನು ತೆರೆಯಲು ಮತ್ತು ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ನೂರು ಹಾಸ್ಟೆಲ್‌ಗಳನ್ನು ತೆರೆಯಲು ಹಣ ಕೊಡಬೇಕೆಂದು ಕೇಳಿಕೊಂಡೆ. ಆಗ ಅವರು ದೊಡ್ಡ ಮನಸ್ಸು ಮಾಡಿ ಇತರೇ ಸಂಪನ್ಮೂಲಗಳಿಂದ ೩ ಕೋಟಿ ರೂಪಾಯಿಗಳನ್ನು ಇದಕ್ಕಾಗಿ ಒದಗಿಸಿಕೊಟ್ಟರು. ಎಸ್.ಸಿ. ಮತ್ತು ಎಸ್.ಟಿ.ಗೆ ಸಂಬಂಧಪಟ್ಟಂತೆ ೫೦ ಹಾಸ್ಟಲ್‌ಗಳನ್ನು ಮತ್ತು ಬಿ.ಸಿ.ಎಂ. ವಿದ್ಯಾರ್ಥಿಗಳಿಗೆ ಸಂಬಂಧಪಟ್ಟಂತೆ ೫೦ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡಿ ಎಂದು ಆದೇಶ ಕೊಟ್ಟಿದ್ದಾರೆ. ಅದಕ್ಕಾಗಿ ನಾನು ಮಾನ್ಯ ಮುಖ್ಯಮಂತ್ರಿಗಳನ್ನು ಅಭಿನಂದಿಸುತ್ತೇನೆ. ಮಾನ್ಯ ಗುರುಪ್ರಸಾದ್ ಅವರು ಈಗಿರುವ ಹಾಸ್ಟಲ್‌ಗಳ ಪರಿಸ್ಥಿತಿ ಬಗ್ಗೆ ಹೇಳಿದರು. ಇದಕ್ಕೆ ಸಂಬಂಧಪಟ್ಟಂತೆ ಇವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚಿಸಲಾಗಿತ್ತು. ಇವರು ಇಡೀ ರಾಜ್ಯಾದ್ಯಂತ ಪ್ರವಾಸ ಮಾಡಿ ಒಂದು ಒಳ್ಳೆಯ ವರದಿ ಕೊಟ್ಟಿದ್ದಾರೆ. ಅನೇಕ ಹಾಸ್ಟಲ್‌ಗಳಿಗೆ ಕಟ್ಟಡಗಳೇ ಇಲ್ಲ. ಕೆಲವು ಕಡೆ ವಿದ್ಯಾರ್ಥಿಗಳನ್ನು ಹಾಸ್ಟಲ್‌ಗಳಲ್ಲಿ ಕುರುದೊಡ್ಡಿಯ ತರಹ ತುಂಬಿದ್ದಾರೆಂದು ನೀವಾದಂಥ ಚಿತ್ರವನ್ನು ಈ ಸಭೆಯ ಗಮನಕ್ಕೆ ತಂದಿದ್ದಾರೆ. ಇದರ ಬಗ್ಗೆ ಸಹ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ. ಇನ್ನೂ ೫ ವರ್ಷಗಳಲ್ಲಿ ಈ ಹಾಸ್ಟಲ್‌ಗಳ ಸ್ಥಿತಿಗತಿಗಳನ್ನು ಸುಧಾರಣೆ ಮಾಡುವ ಬಗ್ಗೆ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಅದಕ್ಕಾಗಿ ಪ್ರತಿವರ್ಷ ೫ ಕೋಟಿ ರೂಪಾಯಿಗಳನ್ನು ಒದಗಿಸಬೇಕೆಂದು ಕೇಳಿದ್ದೇವೆ. ಈ ಬಗ್ಗೆ ಸಹ ಮುಖ್ಯಮಂತ್ರಿಗಳು ಭರವಸೆ ಕೊಟ್ಟಿದ್ದಾರೆ. ಸಮಾಜ ಕಲ್ಯಾಣ ಇಲಾಖೆ ಮೂಲಕ ಹಾಕಿಕೊಂಡಿರುವ ಇಂತಹ ಒಂದು ಕಾರ್ಯಕ್ರಮಕ್ಕೆ ಮುಖ್ಯಮಂತ್ರಿಗಳ ಆಶೀರ್ವಾದ ಇದೆ. ಒಟ್ಟಿನಲ್ಲಿ ಈ ಒಂದು ಸಮಸ್ಯೆಯನ್ನು ಹಂತಹಂತವಾಗಿ ಬಗೆಹರಿಸಲಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಸಭೆಯ ಗಮನಕ್ಕೆ ತರುತ್ತಿದ್ದೇನೆ. ಈ ಸಲ ಚಿಕ್ಕಬಳ್ಳಾಪುರ ಮತ್ತು ಹಾಸನದಲ್ಲಿ ಹಾಸ್ಟಲ್‌ಗಳನ್ನು ಪ್ರಾರಂಭ ಮಾಡುವುದಕ್ಕೆ ನಾನು ಆದೇಶ ಕೊಡುತ್ತೇನೆ.

ಶ್ರೀ ಹೆಚ್.ಕೆ. ಕುಮಾರಸ್ವಾಮಿ.— ನಾನು ಅಂತಿಮ ವರ್ಷದ ಪರೀಕ್ಷೆ ಬಗ್ಗೆ ಹೇಳುತ್ತಿಲ್ಲ. ಆದರೆ ನೋಡಲನಿಯ ವರ್ಷದ ಮತ್ತು ಎರಡನೇ ವರ್ಷದ ಡಿಗ್ರಿ ತರಗತಿಗಳಲ್ಲಿ ಯಾರಾದರೂ ಒಂದು ವರ್ಷ ಫೇಲ್ ಆದರೆ, ಅಂತಹವರಿಗೆ ಹಾಸ್ಟಲ್‌ಗಳಲ್ಲಿರುವುದಕ್ಕೆ ಅವಕಾಶ ಮಾಡಿಕೊಡಬೇಕು. ಒಂದು ವೇಳೆ ಎರಡನೇ ವರ್ಷವೂ ಯಾರಾದರು ಫೇಲ್ ಆದರೆ ಅಂತಹವರಿಗೆ ಹಾಸ್ಟಲ್‌ನಲ್ಲಿ ಜಾಗ ಕೊಡುವುದೂ ಬೇಡ. ಈಗ ಇದಕ್ಕೆ ಸಂಬಂಧಪಟ್ಟಂತೆ ಹೊರಡಿಸಿರುವ ಸರ್ಕಾರಿ ಆಜ್ಞೆ ಕೇವಲ ಒಂದು ವರ್ಷಕ್ಕೆ ಸೀಮಿತವಾಗಿದೆ. ಅದನ್ನು ಮಂತ್ರಿ ಮುಂದುವರೆಸಬೇಕೆಂದು ಹೇಳುತ್ತಿದ್ದೇನೆ. ಇದರ ಜೊತೆಗೆ ನಮ್ಮ ಹಿರಿಯ ಸದಸ್ಯರಾದ ಶ್ರೀ ಮುನಿಯಪ್ಪನವರು ಹೇಳಿದಂತೆ ವಿಶೇಷ ಘಟಕ ಯೋಜನೆಯಲ್ಲಿರುವ ಹಣವನ್ನು ಅನಾವಶ್ಯಕವಾಗಿ ಬಳಸದೆ, ಅದೇ ದುಡ್ಡನ್ನು ವಸತಿ ಶಾಲೆಗಳನ್ನು ತೆರೆಯಲು ಬಳಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ —ಮಾನ್ಯ ಅಧ್ಯಕ್ಷರೇ, ನಾನು ಈಗಾಗಲೇ ಸವಿಸ್ತಾರವಾಗಿ ಹೇಳಿದ್ದೇನೆ. ಈ ಪರಿಶಿಷ್ಟ ಜಾತಿ ಮತ್ತು ವರ್ಗಗಳ ವಿದ್ಯಾರ್ಥಿಗಳಿಗೆ ಯಾವ ರೀತಿ ಸಹಾಯ ಮಾಡಬಹುದೆಂಬ ಬಗ್ಗೆ ಚರ್ಚಿಸಲು ನಾನು ಶಾಸಕರ ಒಂದು ಸಭೆಯನ್ನು ಕರೆಯುತ್ತೇನೆ. ಈ ವಿಚಾರದಲ್ಲಿ ನಾನು ಸಹ ನಿಮ್ಮ ಜೊತೆಯಲ್ಲಿದ್ದೇನೆ. ನಿಮಗೆ ನಾನು ಎಲ್ಲ ರೀತಿಯ ಸಹಕಾರ ಕೊಡುತ್ತೇನೆ. ಸ್ಪೆಷಲ್ ಕಾಂಪೊನೆಂಟ್ ಪ್ಲಾನ್‌ನಲ್ಲಿ ಕೆಲವು ಅನುಪಯುಕ್ತವಾದ ಕಾರ್ಯಕ್ರಮಗಳಿವೆ. ಆದ್ದರಿಂದ ಇದಕ್ಕೆ ಸಂಬಂಧಪಟ್ಟ ಹಣವನ್ನು ಹಾಸ್ಟಲ್‌ಗಳನ್ನು ಕಟ್ಟಿಸುವುದಕ್ಕೆ ಬಳಸುತ್ತೇವೆ.

ಶ್ರೀ ಬಿ. ಗುರುಪ್ರಸಾದ್.—ಮಾನ್ಯ ಮಂತ್ರಿಗಳು ಬಹಳ ಮುಖ್ಯವಾದ ಸ್ಟೇಟ್‌ಮೆಂಟ್ ಮಾಡಿದ್ದಾರೆ. ಅದಕ್ಕಾಗಿ ನಾನು ಈ ಹಾಸ್ಟಲ್ ಕಮಿಟಿ ಚೇರ್‌ಮನ್ ಆಗಿ ಮತ್ತು ಇದರ ಸದಸ್ಯರ ಪರವಾಗಿ ನಾನು ಅವರನ್ನು ಅಭಿನಂದಿಸುತ್ತೇನೆ. ಈಗ ಎಸ್.ಸಿ ಮತ್ತು ಎಸ್ ಟಿ. ಹಾಸ್ಟಲ್‌ಗಳು ಎನಿವೆ, ಇವುಗಳ ಮೇನೇಜ್‌ಮೆಂಟ್‌ನವರು ಮತ್ತು ಇವುಗಳನ್ನು ಸೂಪರ್‌ವೈಜ್ ಮಾಡುವವರು ತಮ್ಮ ಕೆಲಸವನ್ನು ಸರಿಯಾಗಿ ನಿರ್ವಹಿಸದೆ ಬಹಳಷ್ಟು ನಿರ್ಲಕ್ಷ್ಯತನ ತೋರಿಸುತ್ತಿದ್ದಾರೆಂದು ಹೇಳಿದರೆ ತಪ್ಪಾಗಲಾರದು. ಆದ್ದರಿಂದ ಮಾನ್ಯ ಮಂತ್ರಿಗಳು ಈ ಹಾಸ್ಟಲ್‌ಗಳಿಗೆ ಆನಿರೀಕ್ಷಿತ ಭೇಟಿ ಕೊಟ್ಟು ನೋಡಬೇಕು ಮತ್ತು ಸರಿಯಾಗಿ ಸೂಪರ್‌ವೈಜ್ ಮಾಡದ ಅಧಿಕಾರ ವರ್ಗದವರನ್ನು ಸಸ್ಪೆಂಡ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಗುರುಪ್ರಸಾದ್ ಅವರು ಈ ಹಾಸ್ಪಲ್ ಮೇನೇಜ್‌ಮೆಂಟ್ ಬಗ್ಗೆ ಈಗಾಗಲೇ ಒಂದು ವರದಿಯನ್ನು ಸರ್ಕಾರಕ್ಕೆ ಕೊಟ್ಟಿದ್ದಾರೆ. ಅವರ ವರದಿಯಲ್ಲಿ ಸಹ ಇದೇ ಮಾತನ್ನು ಹೇಳಿದ್ದಾರೆ ಮತ್ತು ಇದಕ್ಕೇ ಒಂದು ಪ್ರತ್ಯೇಕ ಡೈರಕ್ಟರೇಟ್ ರಚನೆಯಾಗಬೇಕೆಂದು ಹೇಳಿದ್ದಾರೆ. ಅವರ ಶಿಫಾರಸ್‌ನ್ನು ನಾವು ತತ್ವಶಃ ಒಪ್ಪಿದ್ದೇವೆ. ಈ ಹಾಸ್ಪಲ್‌ಗಳಿಗೆ ಸಂಬಂಧಪಟ್ಟಂತೆ ಒಂದು ಪ್ರತ್ಯೇಕ ಡೈರಕ್ಟರೇಟ್ ರಚನೆ ಮಾಡುವ ಬಗ್ಗೆ ಮಾನ್ಯ ಮಂತ್ರಿಗಳು ಸಹ ಈಗಾಗಲೇ ಅನೌನ್ಸ್ ಮಾಡಿದ್ದಾರೆ. ಆದನ್ನು ನಾವು ಕಾರ್ಯರೂಪಕ್ಕೆ ತರುತ್ತಿದ್ದೇವೆ. ಅವರು ಮಾಡಿರುವ ಶಿಫಾರಸ್‌ಗಳ ಬಗ್ಗೆ ಸಮಾಜ ಕಲ್ಯಾಣ ಇಲಾಖೆಯವರು ಕ್ರಮ ತೆಗೆದುಕೊಂಡಿದ್ದಾರೆ. ರೀ-ಆರ್ಗನೈಜೇಷನ್‌ಗೆ ಸಂಬಂಧಪಟ್ಟ ಪ್ರಪೋಸಲ್ ಸಹ ಈಗ ಸರ್ಕಾರದ ಮುಂದಿದೆ. ಈಗ ತಾಲ್ಲೂಕ್ ಮಟ್ಟದಲ್ಲಿರುವಂತಹ ಹಾಸ್ಪಲ್‌ಗಳನ್ನು ನಮ್ಮ ಇಲಾಖಾ ಅಧಿಕಾರಿಗಳಿ ಸೂಪರ್‌ವೈಜ್ ಮಾಡುವ ಬಗ್ಗೆ ನಾವು ಒಂದು ಕಾರ್ಯಕ್ರಮವನ್ನು ರೂಪಿಸಿದ್ದೇವೆ ಇದಕ್ಕೆ ಸರ್ಕಾರ ಒಪ್ಪಿಗೆ ಕೊಟ್ಟ ಕೂಡಲೇ ಜಾರಿಗೆ ತರುತ್ತೇವೆ ಮತ್ತು ಇರುವಂತಹ ಲೋಪದೋಷಗಳನ್ನು ಪರಿಪಡಿಸುತ್ತೇವೆ.

ನಿಯಮ ೩೫ಳಿರ ಮೇರೆಗೆ

(೧) ಕೋಲಾರ ಜಿಲ್ಲೆಗೆ ಹೆಚ್ಚು ಬಸ್ಸುಗಳನ್ನು ಒದಗಿಸುವ ಬಗ್ಗೆ

ಶ್ರೀ ಆರ್. ವೆಂಕಟರಾಮಯ್ಯ (ಮಂಗಳಬಾಗಿಲು).—ಮಾನ್ಯ ಅಧ್ಯಕ್ಷರೇ,

ಬೆಂಗಳೂರಿನಿಂದ ಕೋಲಾರಕ್ಕೆ (ಕೆ.ಜಿ.ಎಫ್.), ಮಂಗಳಬಾಗಿಲಿಗೆ, ಚಿಂತಾಮಣಿ, ಚಿಕ್ಕಬಳ್ಳಾಪುರಕ್ಕೆ ವಿಪರೀತ ಟ್ರಾಫಿಕ್ ಇರುವ ರಸ್ತೆಗಳಲ್ಲಿ ಕೆ.ಎಸ್.ಆರ್.ಟಿ.ಸಿ. ಹಾಕಿರುವ ಬಸ್‌ಗಳು ಏನೇನೂ ಸಾಕಾಗುವುದಿಲ್ಲ. ಇದರಿಂದ ಪ್ರಯಾಣಿಕರಿಗೆ ವಿಪರೀತ ತೊಂದರೆಯಾಗಿದೆ. ಮಾನ್ಯ ಸಾರಿಗೆ ಮಂತ್ರಿಗಳು ಇದನ್ನು ಸರಿಪಡಿಸಿ ಹೆಚ್ಚುವರಿ ಬಸ್ಸುಗಳನ್ನು ಕೊಡುವಂತೆ ವ್ಯವಸ್ಥೆ ಮಾಡುವಿರಾ ?

ಈ ಬಗ್ಗೆ ಸಾರ್ವಜನಿಕರು ಮನವಿ ಮಾಡಿಕೊಂಡಿರುವುದರಿಂದ ಮಾನ್ಯ ಸಚಿವರು ಹೆಚ್ಚುವರಿ ಬಸ್ಸುಗಳನ್ನು ಕೊಪಲೇಬೇಕೆಂದು ಈ ಮೂಲಕ ಮನವಿಯನ್ನು ಮಾಡುತ್ತೇನೆ.

ಶ್ರೀ ವೀರಣ್ಣ (ಸಾರಿಗೆ ಇಲಾಖೆ ರಾಜ್ಯ ಮಂತ್ರಿಗಳು),—ಮಾನ್ಯ ಅಧ್ಯಕ್ಷರೇ,

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸಾರಿಗೆ ಬೇಡಿಕೆಗನುಗುಣವಾಗಿ ಸಾರಿಗೆ ಸೇವೆಯನ್ನು ನೀಡುತ್ತಿದೆ. ಬೇಡಿಕೆ ಹೆಚ್ಚಿದಾಗಲೆಲ್ಲಾ ಬಸ್ಸುಗಳನ್ನು ಸಹಾ ಹೆಚ್ಚಿಸಲಾಗುತ್ತಿದೆ. ಅಲ್ಲದೆ ಭಾರಿ ವಾಹನಗಳ ಓಡಾಟಕ್ಕೆ ಯೋಗ್ಯವಾದ ರಸ್ತೆಗಳು ನಿರ್ಮಾಣವಾದಗಲೆಲ್ಲಾ ಹೊಸದಾಗಿ ಸಾರಿಗೆ ಸೇವೆಯನ್ನು ಅಂತಹ ಮಾರ್ಗಗಳಲ್ಲಿ ನೀಡಲಾಗುತ್ತಿದೆ. ಈ ಕೆಳಕಂಡ ಪಟ್ಟಿಯು ಕಾಲಕಾಲಕ್ಕೆ ಹೆಚ್ಚಿಸಲಾದ ಮಾರ್ಗಸೂಚಿಗಳ ಸಂಖ್ಯೆಯನ್ನು ತೋರಿಸುತ್ತದೆ.

ವರ್ಷ	ಮಾರ್ಗಸೂಚಿಗಳ ಸಂಖ್ಯೆ	ಪರಿಣಾಮಕಾರಿ ಕಿ.ಮೀ.ಗಳಲ್ಲಿ (ಪ್ರತಿದಿನ) ಲಕ್ಷಗಳಲ್ಲಿ)	ದಿನವಹಿ ಒಯ್ಯಲಾದ ಪ್ರಯಾಣಿಕರು (ಲಕ್ಷಗಳಲ್ಲಿ)
೧	೨	೩	೪
೧೯೮೧–೮೨	೪೪೫೯	೧೧–೨೨	೨೬–೫೧
೧೯೮೨–೮೩	೪೮೭೬	೧೩–೪೦	೩೦–೦೦
೧೯೮೩–೮೪	೫೧೮೯	೧೪–೧೦	೩೨–೯೦
೧೯೮೪–೮೫	೫೪೧೯	೧೫–೧೦	೩೪–೮೨
೧೯೮೫–೮೬	೬೦೨೦	೧೭–೮೮	೪೦–೧೯